# ಚಿಕಾಗೋ ಉಪನ್ಯಾಸಗಳು : ೧೨೫ನೇ ವಾರ್ಷಿಕೋತ್ಸವ

ಸೆಪ್ಟೆಂಬರ್ ೧೧ ಎಂದ ಕೂಡಲೇ ಸ್ವಾಮಿ ವಿವೇಕಾನಂದರು ೧೮೯೩ರಲ್ಲಿ ಮಾಡಿದ ಚಿಕಾಗೋ ಭಾಷಣದ ನೆನಪಾಗುತ್ತದೆ. ಆ ಒಂದು ಭಾಷಣದಿಂದಾಗಿ ಕೇವಲ ಸ್ವಾಮೀಜಿಯಷ್ಟೇ ಅಲ್ಲ, ಇಡೀ ಭಾರತವೇ ಜಗದ್ವಿಖ್ಯಾತವಾಯಿತು. ಹಿಂದೂಧರ್ಮದ ಸನಾತನ ತತ್ತ್ವಗಳು ಹೊಸ ಸಂದರ್ಭದಲ್ಲಿ ಮತ್ತೆ ಬೆಳಗಿದವು. 'ಕೊಲಂಬಿಯನ್ ಜಾಗತಿಕ ಮೇಳ'ದ ಅಂಗವಾಗಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮದ ಪ್ರತಿನಿಧಿಯಾಗಿ ಸ್ವಾಮಿ ವಿವೇಕಾನಂದರು ಮಾತನಾಡಲು ಎದ್ದು ನಿಂತಾಗಲೇ ಇಡೀ ಜಗತ್ತಿನ ಗಮನವೆಲ್ಲ ಅತ್ತ ಸೆಳೆದಂತಾಗಿತ್ತು. ಆಕರ್ಷಕ ಭಂಗಿ, ದಿವ್ಯದೀಪ್ತ ಮುಖಮಂಡಲ, ಆಧ್ಯಾತ್ಮಿಕ ತೇಜಸ್ಸಿನಿಂದ ಹೊಳೆಯುತ್ತಿದ್ದ ವಿಶಾಲನೇತ್ರಗಳು ಇವುಗಳ ಮಾಂತ್ರಿಕ ಸ್ಪರ್ಶಕ್ಕೆ ಒಳಗಾದ ಇಡೀ ಸಭೆ, ಒಂದು ಕ್ಷಣ ಸ್ವಾಮೀಜಿ ಸಭಿಕರನ್ನು ಉದ್ದೇಶಿಸಿ, ''**ಅಮೆರಿಕಾದ ಸಹೋದರಿಯರೇ ಹಾಗೂ ಸಹೋದರರೇ ...**'' ಎಂದು ಸಂಬೋಧಿಸಿದ ಕೂಡಲೇ ವಿದ್ಯುತ್ ಸಂಚಾರದ ಆವೇಗಕ್ಕೆ ಒಳಗಾಗಿ, ಸುದೀರ್ಘ ಕರತಾಡನಗಳೊಂದಿಗೆ ಅವರನ್ನು ಅಭಿನಂದಿಸಿತು. ಮೇಲ್ನೋಟಕ್ಕೆ ಅದೊಂದು ಸಭೆ; ಒಬ್ಬರು ಭಾಷಣಕಾರರು; ನೆರೆದಿದ್ದವರು ಸಭಿಕರು. ಆದರೆ ಚಿಕಾಗೋ ಆರ್ಟ್ ಇನ್‌ಸ್ಟಿಟ್ಯೂಟಿನಲ್ಲಿ ನಡೆದ ಈ ಸಭೆ ಎರಡು ಪ್ರಪಂಚಗಳ, ಎರಡು ಭಾವಗಳ ಹಾಗೂ ಎರಡು ಮಾನವ ಧ್ಯೇಯಗಳ ಮುಖಾಮುಖಿಯಾಗಿತ್ತು; ಮುಂದಿನ ಮಹಾ ಸಮನ್ವಯಕ್ಕೆ ನಾಂದಿಯಾಗಿತ್ತು.



ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಗೆ ಸೋದರಿ ನಿವೇದಿತಾ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾಳೆ: ''ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕುರಿತು ಮಾತನಾಡಲು ಅವರು ಪ್ರಾರಂಭಿಸಿದರು; ಆದರೆ ಅವರು ಸಮಾಪ್ತಿಗೊಳಿಸಿದಾಗ ಹಿಂದೂ ಧರ್ಮವೇ ಸೃಷ್ಟಿಯಾಗಿತ್ತು.'' *(ಕೃತಿಶ್ರೇಣಿ, ಸಂ. ೧, ಪು.XI)* ಹಿಂದೆಂದೂ ಭಾರತೀಯ ವಿಚಾರಧಾರೆ, ಅಧ್ಯಾತ್ಮ ಹಾಗೂ ಹಿಂದೂಧರ್ಮದ ಭಾವನೆಗಳು ತನ್ನೆಲ್ಲ ಸಮಗ್ರತೆಯೊಂದಿಗೆ ಪಾಶ್ಚಾತ್ಯ ಜಗತ್ತಿನ ಮುಂದೆ ಪ್ರಕಟವಾಗಿರಲಿಲ್ಲ. ಇಲ್ಲಿ ಕೇವಲ ಭಾವನೆ, ತತ್ತ್ವಗಳಷ್ಟೇ ಅಲ್ಲ ಇದ್ದುದು; ಇಡೀ ಭಾರತವನ್ನು ಅದರ ಎಲ್ಲ ಪರಂಪರೆ, ಧರ್ಮ, ಸಿದ್ಧಾಂತಗಳೊಂದಿಗೆ ಪ್ರತಿನಿಧಿಸುವ ಒಬ್ಬ ಜೀವಂತ ವ್ಯಕ್ತಿ ಅವರೆದುರು ನಿಂತಿದ್ದನು. ಸ್ವಾಮೀಜಿ ಮಾತನಾಡಲು ಆರಂಭಿಸಿದಾಗ ಅವರು ವಾಗ್ದೇವತೆಯನ್ನು ನೆನೆದರಂತೆ. ಅದರೊಂದಿಗೆ ಶ್ರೀರಾಮಕೃಷ್ಣರ ಅವ್ಯಕ್ತ ಚೇತನವೂ ಅದೃಶ್ಯವಾಗಿ ನಿಂತು ಅವರ ವಾಣಿಯಾಗಿ ಹೊರಹೊಮ್ಮಿರಬೇಕು. ಸ್ವಾಮಿ ವಿವೇಕಾನಂದರ ಭಾಷಣ ಕೇವಲ ಆ ಒಂದು ಸಭೆಯನ್ನಷ್ಟೇ ಪ್ರಭಾವಿಸಿದ್ದಲ್ಲ ; ಅಲ್ಲಿಂದ ಅದರ ಪ್ರಭಾವ ಸಮುದ್ರದ ಅಲೆಅಲೆಗಳಂತೆ ಭೋರ್ಗರೆಯುತ್ತ ಪೂರ್ವ-ಪಶ್ಚಿಮ ದೇಶಗಳ ಉದ್ದಕ್ಕೂ ವ್ಯಾಪಿಸಿತು. ಅವರ ಮುಂದಿನ ದಿಗ್ವಿಜಯ ಎಲ್ಲೆಡೆ ಹೊಸ ಧಾರ್ಮಿಕ, ಆಧ್ಯಾತ್ಮಿಕ ಸಂಚಾರ, ಹಳೆಯ ಮತ್ತು ಹೊಸ ವಿಚಾರಗಳ ಸಾಮರಸ್ಯ ಇವೆಲ್ಲವೂ ಮುಂದೆ ಇತಿಹಾಸವಾಯಿತು.



ಚಿಕಾಗೋ ಆರ್ಟ್ ಇನ್‌ಸ್ಟಿಟ್ಯೂಟ್

ಧರ್ಮದ ಉದ್ದೇಶವೇ ಜಗತ್ತಿಗೆ ಶಾಂತಿ, ಆಧ್ಯಾತ್ಮಿಕ ಉನ್ನತಿ ಹಾಗೂ ಸಾಮರಸ್ಯದ ಶ್ರೇಷ್ಠ ಬದುಕನ್ನು ಕಲಿಸುವುದು. ಆದರೆ ಎಲ್ಲ ಮತಾಂಧತೆಯ, ಯುದ್ಧ ಹಾಗೂ ಅನಾಹುತಗಳ ಮೂಲ ಕಾರಣ ಹಲವು ಬಾರಿ ಧಾರ್ಮಿಕ ಪಂಥಗಳಲ್ಲೇ ಹುಟ್ಟಿಕೊಂಡಿರುವುದು ಸ್ವಾಮೀಜಿಯವರಿಗೆ ಸುಸ್ಪಷ್ಟವಾಗಿತ್ತು. ಚಿಕಾಗೋ ಉಪನ್ಯಾಸಗಳಲ್ಲಿ ಅವರು ಧರ್ಮಸಮನ್ವಯದ ಸಂದೇಶವನ್ನು ಅತ್ಯಂತ ಪ್ರಭಾವಶಾಲಿಯಾಗಿ ಸಾರಿದರು. ''ಇಂದು ಬೆಳಿಗ್ಗೆ ಈ ಸಭೆಯ ಶುಭಾರಂಭವನ್ನು ಸೂಚಿಸಲು ಮೊಳಗಿದ ಘಂಟನಾದವು ಎಲ್ಲ ಮತಾಂಧತೆಯ, ಖಡ್ಗ ಇಲ್ಲವೇ ಲೇಖನಿಯಿಂದ ಸಾಧಿಸಿದ ಮತೀಯ ಹಿಂಸೆಗಳ, ಒಂದೇ ಗುರಿಯೆಡೆಗೆ ಸಾಗುತ್ತಿದ್ದರೂ ಪಥಿಕರಲ್ಲಿ ತಲೆದೋರುತ್ತಿರುವ ಉದಾರವಲ್ಲದ ಎಲ್ಲ ಮನಸ್ತಾಪಗಳ ಅಂತ್ಯಕ್ರಿಯೆಯನ್ನು ಸೂಚಿಸುವ ಘಂಟಾನಾದವೂ ಆಗಲಿ ಎಂಬುದೇ ನನ್ನ ಆಶಯ'' ಎಂದು ಅವರು ತಮ್ಮ ಮೊದಲ ಚಿಕಾಗೋ ಭಾಷಣವನ್ನು ಮುಗಿಸುತ್ತಾರೆ.

ಚಿಕಾಗೋ ಉಪನ್ಯಾಸಗಳ ನಂತರ ಸ್ವಾಮಿ ವಿವೇಕಾನಂದರು ಜಗತ್ಪ್ರಸಿದ್ಧರಾದರು. ಅಮೆರಿಕ, ಯೂರೋಪ್ ಹಾಗೂ ಭಾರತದಲ್ಲಿ ಅವರು ವ್ಯಾಪಕವಾಗಿ ಪ್ರವಚನ ಮಾಡಿದರು, ಹಲವು ಮಂದಿ ಪ್ರಮುಖ ವ್ಯಕ್ತಿಗಳೊಂದಿಗೆ ವಿಚಾರ ವಿನಿಮಯ ಮಾಡಿದರು. ಆದರೆ ಅವರು ಎಂದಿಗೂ ತನ್ನ ಮಾತೃಭೂಮಿ, ತನ್ನ






ಚಿಕಾಗೋದಲ್ಲಿ ಪ್ರದರ್ಶಿಸಿದ ಭಿತ್ತಿಚಿತ್ರ

ದೇಶದ ಜನತೆ, ಹಾಗೂ ತನ್ನ ಆದರ್ಶ-ಧ್ಯೇಯಗಳನ್ನು ಮರೆಯಲಿಲ್ಲ. ಹಿಮಾಲಯದ ತುತ್ತತುದಿಗೇರಿದರೂ ದೂರದ ತನ್ನ ಹಳ್ಳಿಯ ಮಣ್ಣಿನ ವಾಸನೆಯನ್ನು ಮರೆಯದ ಪರ್ವತಾರೋಹಿಯಂತೆ, ಪ್ರಸಿದ್ಧಿಯ ಶಿಖರಕ್ಕೇರಿದರೂ, ಆಧ್ಯಾತ್ಮಿಕ ಅನುಭವದ ಉತ್ತುಂಗಕ್ಕೇರಿದರೂ ಅವರ ಹೃದಯ ಮಗುವಿನಂತಿತ್ತು; ಪ್ರತಿಯೊಂದು ಜೀವಿಗೂ ಮಿಡಿಯುತ್ತಿತ್ತು. ವಿಶ್ವದಾದ್ಯಂತ ಹೊಸ ಆಧ್ಯಾತ್ಮಿಕ ಅಲೆಯನ್ನೇ ಎಬ್ಬಿಸಿದರು ಸ್ವಾಮೀಜಿ. ವಿಶ್ವಭ್ರಾತೃತ್ವ, ವಿಶ್ವಧರ್ಮ ಹಾಗೂ ಪ್ರಾಯೋಗಿಕ ವೇದಾಂತದ ಮಹತ್ವವನ್ನು ಸಾರಿದ ಅವರ ಸಂದೇಶಗಳು ಇಂದಿಗೂ ಜಗತ್ತಿನೆಲ್ಲೆಡೆ ಅನುರಣಿಸುತ್ತಿವೆ. ಚಿಕಾಗೋ ಉಪನ್ಯಾಸದ ಮೂಲಕ ಸ್ವಾಮೀಜಿಯವರ ಮಹಾನ್ ವ್ಯಕ್ತಿತ್ವ ಇಡೀ ಜಗತ್ತಿನ ಮುಂದೆ ಪ್ರಕಟಗೊಂಡಿತು; ಇದು ವಿಶ್ವನಿಯಾಮಕನ ವ್ಯವಸ್ಥಿತ ಯೋಜನೆಗೆ ಅನುಗುಣವಾಗಿಯೇ ನಡೆದಿರಬಹುದು! ಹಲವು ಏರುಪೇರುಗಳ, ಕಾಲಬದ್ಧ ಬದಲಾವಣೆಗಳ ನಡುವೆ, ಪ್ರಕೃತಿಯ ಲೀಲಾವ್ಯಾಪಾರದಲ್ಲಿ ಇದೊಂದು ಹೊಸ ಮಿಂಚು! ಜಗತ್ತನ್ನೇ ತನ್ನತ್ತ ಸೆಳೆದ ಆಕರ್ಷಕ ಬೆಳಕಿನೊಂದಿಗೇ ಅನುಸರಿಸಿ ಬಂತು ಅಲೆಯಲೆಯಾದ ಗುಡುಗಿನ ಶಬ್ದಸಾಗರ! ನೆನೆದಷ್ಟೂ ಗಂಭೀರ, ಶಾಂತ ಹಾಗೂ ಸುಮಧುರ ಅವರ ವಾಣಿ. ಚಿಕಾಗೋ ಉಪನ್ಯಾಸಗಳು ನಡೆದು ಇಂದಿಗೆ ೧೨೫ ವರ್ಷಗಳು ಸಂದಿವೆ. ಸ್ವಾಮೀಜಿ ಅಲ್ಲಿ ಮೊಳಗಿಸಿದ ಸಂದೇಶಗಳು ಇನ್ನಷ್ಟು ವ್ಯಾಪಕವಾಗಿ ಹರಡಲಿ ಎಂಬುದೇ ನಮ್ಮ ಹಾರೈಕೆ.